

ಹಾಗೆಂದು ವಿದ್ಯಾರ್ಥಿಗಳು ಜನ್ಮಪೂರ್ತಿ ಗುರುವಿನ ನೆರಳಿನಲ್ಲಿಯೇ ಇರಬೇಕೆಂದಲ್ಲ. ಒಂದು ದಿನ ವಿದ್ಯಾರ್ಥಿಯೂ ಗುರುವಿನ ಆಶ್ರಯದಿಂದ ಹೊರಬಂದು ತನ್ನದೇ ಆದ ಜೀವನ ಕಟ್ಟಿಕೊಂಡು, ಕಲಾಸಾಧನೆಯ ವೇದಿಕೆಯಲ್ಲಿ ಅರಳಲೇಬೇಕು. ಗುರುಗಳ ಆಶೀರ್ವಾದವು ಸಾಧಕರ ಮೇಲೆ ಇದ್ದೇ ಇರುತ್ತದೆ. ಅದು ಸಾಧಕರನ್ನು ರಕ್ಷಿಸುತ್ತದೆ ಕೂಡ.

ಕಠಿಣ ಪರಿಶ್ರಮಕ್ಕೆ ಬದಲಿ ವ್ಯವಸ್ಥೆಯಿಲ್ಲ ಎನ್ನುವುದು ಹೊಸ ತಲೆಮಾರಿನ ಸಾಧಕರಿಗೆ ನನ್ನ ಸಂದೇಶ. ಶ್ರಮಪಡಲು ಸಿದ್ಧರಾಗಿದ್ದಾಗ ಸಾಧನೆಯ ಏಣಿಯೇರುವುದು ಸುಲಭವಾಗುತ್ತದೆ. ನೃತ್ಯದ ಕುರಿತು ಸರಿಯಾದ ಧೋರಣೆಯನ್ನು ಬೆಳೆಸಿಕೊಳ್ಳಬೇಕು. ವಿನಯ, ವಿಧೇಯತೆಯಿದ್ದಾಗ ಮಾತ್ರ ಹೊಸ ಜ್ಞಾನವು ನಮ್ಮೆಡೆಗೆ ಹರಿದುಬರುತ್ತದೆ. ಒಂದಿಷ್ಟು ನೃತ್ಯ ಕಲಿತ ಕೂಡಲೇ 'ಕಲಿಕೆ ಮುಗಿಯಿತು' ಎಂಬ ಧೋರಣೆ ಬಂದರೆ ಮತ್ತೆ ಕಲಾಬದುಕು ಇಲ್ಲವೆಂದೇ ಅರ್ಥ.